## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣ ಲೆಕ್ಕ ಶೀರ್ಷಿಕೆ 2515-00- 101-0-24-059 ಯೋಜನೆಯಡಿ e-Office(Lesspaper office) ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/222/ಎಫ್ಎನ್/2016, ಬೆಂಗಳೂರು, ದಿನಾಂಕ:01.04.2016 ಮತ್ತು 11.04.2016.
2. ಸರ್ಕಾರದ ಅನಧಿಕೃತ ಟಿಪ್ಪಣಿ ಸಂ:ಗ್ರಾಅಪ/04/ಗ.ಕೋಶ/2016, ದಿನಾಂಕ:21.04.2016.
3. ಟಿಪ್ಪಣಿ ಕಂಡಿಕೆ(24) ರಲ್ಲಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ,ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ರವರು ಅನುಮೋದಿಸಿದಂತೆ.

******

**ಪ್ರಸ್ತಾವನೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 2016-17ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣ ಲೆಕ್ಕ ಶೀರ್ಷಿಕೆ 2515-00-101-0-24-059 ಯೋಜನೆಯಡಿಯಲ್ಲಿ ₹ 1125.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

2016-17 ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ ಒಟ್ಟು ₹ 1125.00 ಲಕ್ಷಗಳಲ್ಲಿ e-Office (Less paper office) ಅನುಷ್ಠಾನಕ್ಕಾಗಿ ₹ 1000.00 ಲಕ್ಷ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣಕ್ಕಾಗಿ ₹ 125.00 ಲಕ್ಷ ಅನುದಾನ ಒದಗಿಸಲಾಗಿದೆ. e-Office (Less paper office) ಅನುಷ್ಠಾನಕ್ಕಾಗಿ ಒದಗಿಸಿದ ₹ 1000.00 ಲಕ್ಷ ಅನುದಾನದಲ್ಲಿ e-Office (Less paper office) ಯೋಜನೆ ಅನುಷ್ಠಾನಗೊಳಿಸುವ ಪ್ರಸ್ತಾವನೆಯನ್ನು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು, ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳು ಅನುಮೋದನೆಯನ್ನು ನೀಡಿವೆ.

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳನ್ನು 2016-17ನೇ ಸಾಲಿಗೆ ಮುಂದುವರಿಸಲಾಗಿದೆ. 2016-17ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣ ಲೆಕ್ಕ ಶೀರ್ಷಿಕೆ 2515-00-101-0-24-059 ಯೋಜನೆ(ಹೊಸ ಯೋಜನೆ) ಯಲ್ಲಿ e-Office (Less paper office) ಅನುಷ್ಠಾನಕ್ಕಾಗಿ ಒದಗಿಸಲಾಗಿರುವ ₹ 1000.00 ಲಕ್ಷ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು, ಅದರಂತೆ e-Office (Less paper office) ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/38/ಗ.ಕೋಶ/2015, P-3, ಬೆಂಗಳೂರು, ದಿನಾಂಕ:02.11.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2016-17ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣ ಲೆಕ್ಕಶೀರ್ಷಿಕೆ 2515-00-101-0-24-059 ಯೋಜನೆಯಡಿಯಲ್ಲಿ ನಿಗದಿಪಡಿಸಲಾಗಿರುವ ₹ 1000.00 ಲಕ್ಷಗಳ ಅನುದಾನದ ಮಿತಿಯೊಳಗೆ ಅಗತ್ಯತೆ/ ತಾಂತ್ರಿಕತೆಗೆ ಅನುಗುಣವಾಗಿ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು e-Office(Less paper office) ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ.

...2

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನ ಇಲಾಖೆಗಳಾದ ಕೆಆರ್‌ಐಡಿಎಲ್, ಕೆಆರ್‌ಆರ್‌ಡಿಎ ಮತ್ತು ರಾಜ್ಯದ 30 ಜಿಲ್ಲಾ ಪಂಚಾಯತಿಗಳು ಹಾಗೂ 176 ತಾಲ್ಲೂಕು ಪಂಚಾಯತಿಗಳನ್ನು ಒಳಗೊಂಡಂತೆ e-office ತಂತ್ರಾಂಶ ಅಳವಡಿಸುವುದು.
- ರಾಜ್ಯದ 30 ಜಿಲ್ಲಾ ಪಂಚಾಯತಿಗಳಿಗೆ ಅಗತ್ಯವಿರುವ ಕಂಪ್ಯೂಟರ್ ಪರಿಕರಗಳು, ಡಿಎಸ್‌ಸಿ ಖರೀದಿ ಮತ್ತು ಪ್ರಿಂಟರ್/ಸ್ಕ್ಯಾನರ್‌ಗಳನ್ನು ಒದಗಿಸುವುದು.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವಾಲಯದ ಸಿಬ್ಬಂದಿಗಳಿಗೆ ಮತ್ತು ಗ್ರಾಅಪ ಇಲಾಖೆಯ ಇತರ ಇಲಾಖೆಯ ಸಿಬ್ಬಂದಿಗಳಿಗೆ ಡಿಎಸ್‌ಸಿ ಒದಗಿಸುವುದು.
- ರಾಜ್ಯದ 30 ಜಿಲ್ಲಾ ಪಂಚಾಯತಿಗಳಿಗೆ KSWAN ಸಂಪರ್ಕ ಕಲ್ಪಿಸುವುದು.
- ಸಚಿವಾಲಯ ಹಾಗೂ e-office ಅನುಷ್ಠಾನ ಮಾಡುವ ತಾಲ್ಲೂಕು ಪಂಚಾಯತ್‌ಗಳಿಗೆ ಅಗತ್ಯವಿರುವ ಕಂಪ್ಯೂಟರ್ ಪರಿಕರಗಳು, ಪ್ರಿಂಟರ್/ಸ್ಕ್ಯಾನರ್‌ಗಳನ್ನು ಒದಗಿಸುವುದು.

2016-17ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣ ಲೆಕ್ಕ ಶೀರ್ಷಿಕೆ 2515-00-101-0-24-059 ಯೋಜನೆಯಡಿಯಲ್ಲಿ e-Office (Less paper office) ಅನುಷ್ಠಾನಕ್ಕಾಗಿ ಹಂಚಿಕೆಯಾದ ₹ 1000.00 ಲಕ್ಷ ಅನುದಾನದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ/228/ವೆಚ್ಚ-6/2016, ದಿನಾಂಕ:24.05.2016 ರಲ್ಲಿ ನೀಡಿದ ಅನುಮೋದನೆ ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಯೋಇ/35/ಜಿಯೋವಿ/2016, ದಿನಾಂಕ:21-10-2016 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನಿ ಸರ್ಕಾರದ ಉಪಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಮಾನ್ಯ ಗ್ರಾಅಪ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಯವರಿಗೆ, ಗ್ರಾಅಪ ಇಲಾಖೆ, ಬೆಂಗಳೂರು.
3. ಮಹಾಲೇಖಪಾಲರು(ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇ-ಆಡಳಿತ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು.
8. ಎಲ್ಲಾ ನಿರ್ದೇಶಕರು, ಗ್ರಾಅಪ ಇಲಾಖೆ, ಬೆಂಗಳೂರು.
9. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ. ಬೆಂಗಳೂರು.

10. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ವೃತ್ತ, ಬೆಂಗಳೂರು.
12. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, ಆನಂದ ರಾವ್ ವೃತ್ತ, ಬೆಂಗಳೂರು.
13. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
14. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಹಣಾಧಿಕಾರಿಗಳು.
15. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
16. ಉಪ ನಿರ್ದೇಶಕರು(ಟಿ.ಎನ್.ಎಮ್.ಸಿ), ಖನಿಜ ಭವನ, ಬೆಂಗಳೂರು.
17. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
18. ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪ, ಬೆಂಗಳೂರು.
19. ಸಂಪಾದಕರು, ಕರ್ನಾಟಕ ವಿಕಾಸ, ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಗ್ರಾಅಪ, ಬೆಂಗಳೂರು.